# ಶ್ರೀರಾಮಾನುಜರ ಜೀವನ ಮತ್ತು ಸಾಧನೆ – ೪

◆ ಸ್ವಾಮಿ ತಪಸ್ಯಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

## ಜೀವನ ಸಂಧ್ಯಾಕಾಲ

**ರಾ**ಮಾನುಜರು ಮುಂದಿನ ಅರವತ್ತು ವರ್ಷಗಳ ಸುದೀರ್ಘ ಜೀವನಾವಧಿಯನ್ನು ತಮ್ಮ ಶಿಷ್ಯರಿಗೆ ಮತ್ತು ಭಕ್ತರಿಗೆ ಉಪದೇಶ ನೀಡುತ್ತ ಶುದ್ಧ ವೈಷ್ಣವ ಭಕ್ತಿಯ ಬಗ್ಗೆ ಅನೇಕ ಗ್ರಂಥಗಳನ್ನು ರಚಿಸುತ್ತ, ಶಾಂತವಾಗಿ ಶ್ರೀರಂಗ ಧಾಮದಲ್ಲಿಯೇ ಕಳೆದರು. ಒಂದು ದಿನ ಪ್ರವಚನದ ಮಧ್ಯ ದಲ್ಲಿಯೇ, ಅವರ ದೇಹ ಸ್ತಬ್ಧವಾಯಿತು. ಬಾಹ್ಯಪ್ರಜ್ಞೆ ತಪ್ಪಿತು. ಕಣ್ಣುಗಳ ಅಂಚಿನಿಂದ ಎರಡು ಹನಿ ರಕ್ತ ತೊಟ್ಟಿಕ್ಕಿತು. ಎಚ್ಚೆತ್ತ ನಂತರ, ಭಕ್ತನೊಬ್ಬ ಈ ಭಾವಾತೀತಾವಸ್ಥೆಯ ಬಗ್ಗೆ ವಿಚಾರಿಸಿದ. ಅದಕ್ಕೆ ಅವರು ಹೀಗೆ ಉತ್ತರಿಸಿದರು: 'ಇಂದು ಶ್ರೀಪೆರಂಬುದೂರಿನ ಜನರು ನನ್ನನ್ನು ಅವರ ಪ್ರೇಮಪಾಶದಲ್ಲಿ ಬಂಧಿಸಿಬಿಟ್ಟಿದ್ದಾರೆ. ನನ್ನ ಶಿಲಾಪ್ರತಿಮೆಯಲ್ಲಿ ಪ್ರಾಣಪ್ರತಿಷ್ಠಾಪನೆ ಮಾಡಿದ್ದಾರೆ. ವಿಗ್ರಹದ ಕಣ್ಣು ತೆರೆಸುವ ಧಾರ್ಮಿಕ ಕ್ರಿಯೆ ಯನ್ನೂ ಈಗ ತಾನೇ ಸಂಪನ್ನಗೊಳಿಸಿದ್ದಾರೆ.' ನಿಜವಾದ ಸಂಗತಿಯೇನೆಂದರೆ, ಅವರ ಜನ್ಮಸ್ಥಳದ ಭಕ್ತರು, ಅಲ್ಲಿನ ದೇಗುಲದ ಪ್ರಾಂಗಣದಲ್ಲಿಯೇ, ಇನ್ನೊಂದು ಮಂದಿರವನ್ನು ನಿರ್ಮಿಸಿ ರಾಮಾನುಜರ ಮೂರ್ತಿಯ ಪ್ರತಿಷ್ಠಾಪನೆಯನ್ನು ನಡೆಸಿದ್ದರು. ಹಿಂದೆಯೇ ಉಲ್ಲೇಖಿಸಿದ ಹಾಗೆ, ಮೇಲು ಕೋಟೆಯಲ್ಲಿಯೂ ಇದೇ ರೀತಿಯ ಮಂದಿರವನ್ನು ಕಟ್ಟ ಲಾಗಿತ್ತು. ಈ ಘಟನೆಗಳು ರಾಮಾನುಜರು ತಮ್ಮ ೧೨೦ ವರ್ಷಗಳ ಸುದೀರ್ಘ ಜೀವನದ ಅವಸಾನದ ಮುಂಚೆಯೇ ದಕ್ಷಿಣ ಭಾರತದಲ್ಲೆಡೆ, ವೈಷ್ಣವಧರ್ಮದ ವೈಭವವನ್ನು ಸಂಸ್ಥಾಪಿಸಿರುವುದಕ್ಕೆ ದ್ಯೋತಕಗಳಾಗಿವೆ. ಅವಸಾನಕ್ಕೆ ಮೊದಲು ಅವರು ತಮ್ಮ ಪ್ರಿಯಶಿಷ್ಯ ಕೂರೇಶನ ಪುತ್ರ ಪರಾಶರನಿಗೆ ವೈಷ್ಣವ ಸಮುದಾಯದ ನಾಯಕತ್ವದ ಭಾರ ವಹಿಸಿ ಅವನನ್ನು ತಮ್ಮ ಉತ್ತರಾಧಿಕಾರಿಯಾಗಿ ನಿಯಮಿಸಿ ದರು. ಇದರ ಅನಂತರ ಅವರ ಪ್ರಜ್ಞೆ, ಸಂಪೂರ್ಣವಾಗಿ ಅಂತರ್ಮುಖವಾಗಿಬಿಟ್ಟಿತು. ಇದು ಅವರ ಭಕ್ತರಿಗೆ ಕಾತರ ವನ್ನುಂಟುಮಾಡಿತು. ತಮ್ಮೊಂದಿಗೇ ನೆಲಸಿರುವಂತೆ ಭಕ್ತರು ಒತ್ತಾಯಿಸಿದಾಗ ಅವರು ನುಡಿದರು: "ನನ್ನ ಪ್ರೀತಿಯ ಮಕ್ಕಳೇ, ನೀವೇಕೆ ಅಜ್ಞಾನಿಗಳಂತೆ ಭ್ರಮೆಗೆ ಒಳಗಾಗಿ ದ್ದೀರಿ? ನಾನು ನಿಮ್ಮ ಹೃದಯಗಳಲ್ಲಿ ಸದಾ ನೆಲೆಸಿರುತ್ತೇನೆ. ನಿಮ್ಮನ್ನು ನಾನು ಒಂದು ಕ್ಷಣವೂ ಅಗಲಿರಲಾರೆ." ಭಕ್ತರ ಕೋರಿಕೆಯ ಮೇರೆಗೆ, ರಾಮಾನುಜರು ಇನ್ನೂ ಮೂರು ದಿವಸ ಜೀವಿಸಿದರು.

ತಮ್ಮ ದಿವ್ಯ ಶರೀರವು ತಮ್ಮೊಡನೆ ಸದಾ ಇರಬೇಕೆಂಬ ಭಕ್ತರ ಒತ್ತಾಯದ ಮೇರೆಗೆ, ತ್ವರಿತವಾಗಿ ತಮ್ಮದೊಂದು ವಿಗ್ರಹ ತಯಾರಾಗಬೇಕೆಂದು ರಾಮಾನುಜರು ಆದೇಶವಿತ್ತರು. ಅದರ ಶಿರೋಭಾಗದಲ್ಲಿ ತಮ್ಮ ಪ್ರಾಣವಾಯುವನ್ನು ಹರಿಸಿ ತಮ್ಮೆಲ್ಲಾ ಶಕ್ತಿಯನ್ನೂ, ಆ ಮೂರ್ತಿಯಲ್ಲಿ ಆವಾಹಿಸಿದರು. ಅನಂತರ ಭಕ್ತರನ್ನು ಕುರಿತು ಹೀಗೆಂದರು: "ಮಕ್ಕಳೇ, ಇದು ನನ್ನ ದ್ವಿತೀಯ ಆತ್ಮ. ನನಗೂ ಈ ಪ್ರತಿಕೃತಿಗೂ ಭೇದ ವೆಣಿಸದಿರಿ. ಜೀರ್ಣವಾದ ಈ ತನುವನ್ನು ತ್ಯಜಿಸಿ, ಈ ನೂತನ ಶರೀರದಲ್ಲಿಯೇ ನಾನು ಈಗ ನೆಲೆಸುತ್ತೇನೆ."

ತರುವಾಯ ರಾಮಾನುಜರು, ತಮ್ಮ ಪ್ರಿಯ ಮೈದುನ ನಾದ ಗೋವಿಂದನ ತೊಡೆಯ ಮೇಲೆ ತಲೆಯಿಟ್ಟು, ಕಾಲು ಗಳನ್ನು ಆಂಧ್ರಪೂರ್ಣನೆಂಬ ಶಿಷ್ಯನ ಕಾಲುಗಳ ಮೇಲಿರಿಸಿ, ತಮ್ಮ ಗುರುವಿನ ಪಾದುಕೆಗಳನ್ನೇ ದಿಟ್ಟಿಸಿ ನೋಡುತ್ತಾ, ವೈಕುಂಠಪದವಿಗೇರಿದರು. ಅವರ ದೇಹಾಂತ್ಯವಾದದ್ದು ಕ್ರಿ.ಶ. ೧೧೩೭ನೇ ಇಸವಿಯ ಮಾಘಮಾಸದ ಶುಕ್ಲಪಕ್ಷ ದಶಮಿ, ಶನಿವಾರದಂದು.

## ರಾಮಾನುಜರ ಅಂತಿಮ ಸಂದೇಶ

ತಮ್ಮ ಅಂತ್ಯವು ಸಮೀಪವಾಗುತ್ತಿರಲು, ರಾಮಾನುಜರು ಎಲ್ಲ ಶಿಷ್ಯರಿಗೂ ತಮ್ಮ ಸುತ್ತ ನೆರೆಯುವಂತೆ ಹೇಳಿದರು. ತಮ್ಮ ಉಪದೇಶಗಳನ್ನು ಅವರಿಗೆ ಬೋಧಿಸಿ ಅವುಗಳನ್ನು ಪಾಲಿಸುವಂತೆ ಆದೇಶಿಸಿದರು. ಅದರ ಸಾರಾಂಶ ಹೀಗಿದೆ: "ಎಲ್ಲಾ ಸಂತರು ಮತ್ತು ಮಹಾತ್ಮರನ್ನು ನಿಮ್ಮ ಧಾರ್ಮಿಕ ಗುರುವಿನ ಸೇವೆ ಮಾಡಿದಂತೆಯೇ ಆದರಿಸಿ, ಸತ್ಕರಿಸಿರಿ. ನಿಮ್ಮ ಇಂದ್ರಿಯಗಳಿಗೆ ಎಂದಿಗೂ ದಾಸರಾಗಿರಬೇಡಿ. ಪ್ರಾಪಂಚಿಕ ಜ್ಞಾನದ ಗಳಿಕೆಯಲ್ಲಿ ಮಾತ್ರ ಸಂತುಷ್ಟರಾಗಿರದೆ, ಭಗವಂತನ ಮಾಹಾತ್ಮ್ಯವನ್ನೂ, ಆತನ ಸೃಷ್ಟಿಯ ಅದ್ಭುತ ಗಳನ್ನೂ ಬೋಧಿಸುವ ಸದ್ಗ್ರಂಥಗಳನ್ನು ಪುನಃ ಪುನಃ ಅಧ್ಯಯನ ಮಾಡಿ. ಹೇಗಾದರೂ ಒಂದು ವೇಳೆ ಗುರುಕೃಪೆ ಯಿಂದ ಮಿಂಚಿನಂತೆ ನಿಮಗೆ ಜ್ಞಾನ ದೊರೆತಂದು ನಿಮ್ಮ ಎಲ್ಲ ಇಂದ್ರಿಯಗಳ ಆಕರ್ಷಣೆಯೂ ಅಂತ್ಯಗೊಳ್ಳುವುದು. ನಿಮ್ಮ ಎಲ್ಲ ಭಾವನೆಗಳನ್ನೂ ನಿಸ್ಪೃಹವಾಗಿ ಪರಿಗಣಿಸುವುದನ್ನು ಕಲಿಯಿರಿ. ಭಗವನ್ನಾಮ ಮತ್ತು ಭಗವಂತನ ಲೀಲೆಗಳ ಸ್ಮರಣೆಯ ಜೊತೆಗೆ, ಆತನ ಭಕ್ತರ ನಾಮಸ್ಮರಣೆಯನ್ನು, ಅವರ ಲೀಲೆಗಳ ಸ್ಮರಣೆಯನ್ನು ಮಾಡಿ ಆನಂದವನ್ನು ಹೊಂದಿರಿ. ಯಾವ ವ್ಯಕ್ತಿ ಭಗವದ್ಭಕ್ತರ ಸೇವೆಯನ್ನು ಮಾಡು ತ್ತಾನೆಯೋ, ಅವನು ಶೀಘ್ರವೇ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯುತ್ತಾನೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡಿರಿ.

ಭಗವಂತನ ಮತ್ತು ಆತನ ಭಕ್ತರ ಸೇವೆಯಲ್ಲಿ ನಿಮ್ಮನ್ನು ನೀವು ನಿವೇದಿಸಿಕೊಳ್ಳದಿದ್ದರೆ, ನೀವೆಷ್ಟೇ ಬುದ್ಧಿವಂತ ರಾಗಿದ್ದರೂ, ಉದ್ಧಾರ ಹೊಂದಲಾರಿರಿ. ವೈಷ್ಣವನ ಬಾಳು, ಯಾವುದೇ ಸ್ವಾರ್ಥಪ್ರಯೋಜನವನ್ನು ಗಳಿಸುವ ಸಾಧನ ಎಂದು ಬಗೆಯದಿರಿ. ನಿಮ್ಮ ಆದರ್ಶವನ್ನು ಸಾಕಾರ ಗೊಳಿಸಲು ಪಣ ತೊಡಿ.

"ಪ್ರತಿದಿನವೂ, ಸ್ವಲ್ಪ ಸಮಯ, ಕಡೇ ಪಕ್ಷ ಒಂದು ಗಂಟೆಯಾದರೂ ನಿಮ್ಮ ಗುರುಗಳ ಮಾಹಾತ್ಮ್ಯದ ಧ್ಯಾನ ದಲ್ಲಿ ಮಗ್ನರಾಗಿರಿ. ದಿನವೂ ಕೆಲಕಾಲವನ್ನು ಆಳ್ವಾರರ ಮತ್ತು ಇತರ ಆಚಾರ್ಯರ ಪವಿತ್ರ ಕೃತಿಗಳನ್ನು ಅಧ್ಯಯನ ಮಾಡು ವುದರಲ್ಲಿ ಕಳೆಯಿರಿ. ಸದಾ ಭಗವಂತನಲ್ಲಿ ಪ್ರಪತ್ತಿ ಮಾರ್ಗ ವನ್ನು ಅವಲಂಬಿಸಿರುವ ಮಹಾತ್ಮರ ಸಂಗವನ್ನು ಮಾಡಿ. ಹೇಯವಾದ ಹೊನ್ನು ಮತ್ತು ಇಂದ್ರಿಯಭೋಗಗಳನ್ನೇ ಅನ್ವೇಷಿಸುತ್ತಿರುವ ವ್ಯಕ್ತಿಗಳ ಜೊತೆ ಬೆರೆಯಲೇಬೇಡಿ. ಅದಕ್ಕೆ ಬದಲಾಗಿ ಸಾಧ್ಯವಾದಷ್ಟು ಮಟ್ಟಿಗೆ ಭಗವದ್ಭಕ್ತರ ಜೊತೆಯಲ್ಲಿರಿ. ಯಾವನು ಪರಮಾತ್ಮನ ಪಾವನ ಮೂರ್ತಿ ಯನ್ನು ಬರಿಯ ಶಿಲೆ ಎಂದು ತಿಳಿಯುತ್ತಾನೋ, ಯಾವನು ತನ್ನ ಆಧ್ಯಾತ್ಮಿಕ ಆಚಾರ್ಯನನ್ನು ಸಾಧಾರಣ ಮನುಷ್ಯ ನೆಂದು ಬಗೆಯುತ್ತಾನೋ, ಯಾವನು ಮಹಾಭಕ್ತರಲ್ಲಿಯೂ, ಅವರು ಜನ್ಮವೆತ್ತಿದ ಜಾತಿಯ ಪ್ರಕಾರ ಮೇಲು-ಕೀಳು ಗಳೆಂದು ಭೇದವನ್ನು ಕಾಣುತ್ತಾನೋ, ಯಾವನು ಪವಿತ್ರ ವಾದ ಮತ್ತು ಸರ್ವಪಾಪನಾಶಕವಾದ ಭಗವತ್ ಪಾದೋದಕವನ್ನು ಸಾಧಾರಣವಾದ ನೀರೆಂದು ಕಡೆಗಣಿಸು ತ್ತಾನೋ, ಯಾವನು ಪವಿತ್ರ ಮಂತ್ರಗಳನ್ನು ಬರಿಯ ಶಬ್ದವೆಂದು ಜರೆಯುತ್ತಾನೋ, ಮೂರು ಲೋಕಗಳಿಗೂ ಒಡೆಯನಾದ ದೇವಾಧಿದೇವನಾದ ನಾರಾಯಣನು ಕ್ಷುಲ್ಲಕ ದೇವತೆಗಳಿಗಿಂತ ಹೆಚ್ಚಿನವನಲ್ಲವೆಂದು ಮೂದಲಿಸುತ್ತಾನೋ —ಅಂತಹ ಅಧಮನು ಘೋರ ನರಕಕ್ಕೆ ಬೀಳುವ ಅಯೋಗ್ಯನೆಂದೇ ತಿಳಿಯಿರಿ." ಹೀಗೆ ಉಪದೇಶಿಸಿದ ರಾಮಾನುಜರನ್ನು ಅವರ ಶಿಷ್ಯರು ಈ ಶರೀರದಿಂದ ಜೀವ ನಿರ್ಗಮಿಸುವವರೆಗೂ, ಈ ಭುವಿಯಲ್ಲಿ ತಾವು ಹೇಗೆ ಬಾಳ ಬೇಕೆಂಬುದನ್ನು ಉಪದೇಶಿಸಬೇಕೆಂದು ಕೇಳಿಕೊಂಡರು. ಆದಕ್ಕೆ ಆಚಾರ್ಯರು ಅವರು ಅನುಷ್ಠಾನಕ್ಕೆ ತಂದು ನಡೆಸ ಬೇಕಾದ ಹಲವಾರು ಸಂಗತಿಗಳನ್ನು ಬೋಧಿಸಿದರು. "ಭಗ ವಂತನ ಪಾದಪದ್ಮಗಳಲ್ಲಿ ಸಂಪೂರ್ಣವಾಗಿ ಶರಣಾಗಿರುವ ಭಕ್ತನು ಭವಿಷ್ಯದ ಬಗ್ಗೆ ಯಾವ ಚಿಂತನೆಯನ್ನೂ ಮಾಡ ಬಾರದು. ಅದೆಲ್ಲವೂ ಪರಮಾತ್ಮನ ಅಧೀನದಲ್ಲಿಯೇ ಇದೆ. ಭವಿಷ್ಯದ ಬಗ್ಗೆ ಅಲ್ಪಪ್ರಮಾಣದ ಕಾತರವಿದ್ದರೂ ಅದು ಭಕ್ತನ ಶರಣಾಗತಿಯಲ್ಲಿ ಕಾಪಟ್ಯ ಇರುವುದನ್ನು ತೋರಿಸು ತ್ತದೆ. ಪ್ರತಿಯೊಬ್ಬ ವ್ಯಕ್ತಿಯ ವರ್ತಮಾನದ ಬಾಳು ಆತನ ಪೂರ್ವಕರ್ಮಗಳಿಂದ ವಿಧಿಸಲ್ಪಟ್ಟಿದೆ. ಆದ್ದರಿಂದ ಅದಕ್ಕಾಗಿ ಶೋಕಿಸುವುದು ಅನಾವಶ್ಯಕ. ನಿಮ್ಮ ಕರ್ತವ್ಯಗಳ ಪಾಲನೆ, ಪ್ರಾಪಂಚಿಕ ಉದ್ದೇಶಗಳಿಗೆ ಮಾಡುವ ಸಾಧನವಾಗದೇ ಇರಲಿ. ಅದು ಪರಮಾತ್ಮನ ಸೇವೆಯಾಗಲಿ.

"ಶ್ರೀಭಾಷ್ಯದ ಅಧ್ಯಯನ ಮತ್ತು ಇತರರಿಗೆ ಅದರ ಬೋಧನೆ—ಇವು ಭಗವಂತನಿಗೆ ಪ್ರಿಯವಾದ ಸೇವೆ. ಇದು ಸಾಧ್ಯವಾಗದೇ ಹೋದರೆ ಸಂತರಾದ ಶಟಗೋಪ ಮತ್ತು ಇತರ ಮಹಾಮಹಿಮರ ಸದ್ಗ್ರಂಥಗಳ ಅಧ್ಯಯನ ಮಾಡಿ. ಅದನ್ನು ಅರ್ಹರಾದ ಶಿಷ್ಯರಿಗೆ ಬೋಧಿಸಿ. ಇದೂ ನಿಮಗೆ ಅಸಾಧ್ಯವಾದರೆ, ಪುಣ್ಯಕ್ಷೇತ್ರಗಳಲ್ಲಿ ನೆಲೆಸಿ ಭಗವತ್ ಸೇವೆ ಯಲ್ಲಿ ಕಾಲಯಾಪನೆ ಮಾಡಿರಿ. ಅಥವಾ, ನೀವೆಲ್ಲಿದ್ದೀರೋ ಅಲ್ಲಿಯೇ ನೆಲೆಸಿ ನಿಮ್ಮೆಲ್ಲಾ ಭಾರವನ್ನೂ ಭಗವಂತನ ಮೇಲೆ ಹಾಕಿ, ಆತನ ದಿವ್ಯಮಂತ್ರದ ಮನನದಲ್ಲಿ ಮುಳುಗಿಬಿಡಿ. ಮೇಲಿನ ಎಲ್ಲ ಸಾಧನೆಗಳೂ ನಿಮಗೆ ಅಸಾಧ್ಯವೆಂದು ತೋರಿದರೆ, ಪೂರ್ಣಜ್ಞಾನಿಯೂ, ಭಕ್ತನೂ ಮತ್ತು ಕಾಮನಾ ರಹಿತನೂ ಆದ ಮಹಾತ್ಮನೊಬ್ಬನನ್ನು ಹುಡುಕಿ ಆತನಿಗೆ ನಿಮ್ಮ ಮೇಲೆ ದಯೆ ಬರುವ ರೀತಿಯಲ್ಲಿ ಆತನ ಸೇವೆ ಯನ್ನು ಮಾಡಿ. ನಿಮ್ಮ ಎಲ್ಲಾ ಅಹಂಕಾರವನ್ನು ಕಿತ್ತೊಗೆದು, ಆ ಮಹಾಪುರುಷನು ಹೇಳಿದಂತೆಯೇ ನಡೆಯಿರಿ. ಇದೇ ನಿಮ್ಮ ಮುಕ್ತಿಗೆ ಸಾಧನ.

"ಈ ಭೂಮಿಯ ಬಾಳಿನಲ್ಲಿ, ಜಾಗರೂಕರಾಗಿ ಇರಿ. ವಿವೇಕದಿಂದ ನಿಮ್ಮ ಸ್ನೇಹಿತರು ಯಾರು, ಶತ್ರುಗಳು ಯಾರು ಮತ್ತು ಉದಾಸೀನರು ಯಾರು ಎಂದು ಕಂಡುಕೊಳ್ಳಿ. ಭಗವದ್ಭಕ್ತರನ್ನು ಸಂಧಿಸಿದಾಗ, ನಿಮ್ಮ ಸ್ನೇಹಿತರನ್ನು ಕಂಡಾಗ ಪುಷ್ಪವನ್ನು ಅಥವಾ ಗಂಧವನ್ನು ಸ್ಪರ್ಶಿಸಿದಾಗ ಆಗುವಂತೆ, ನಿಮ್ಮ ಹೃದಯ ಸಂತಸದಿಂದ ನಲಿದಾಡಲಿ. ಕೇವಲ ಪ್ರಾಪಂಚಿಕರನ್ನು ಕಂಡಾಗ ಹಾವನ್ನೋ, ಹುಲಿಯನ್ನೋ ಅಥವಾ ಅಗ್ನಿ ಮುಂತಾದ ಅಪಾಯಗಳನ್ನು ಎದುರಿಸುವಾಗ ಆಗುವಂತೆ ನಿಮ್ಮ ಹೃದಯ ಕಂಪಿಸಲಿ. ನಿಮ್ಮೆಡೆಗೆ ಉದಾಸೀನ ರಾದವರನ್ನು ನೋಡಿದಾಗ, ಮರದ ಕೊರಡನ್ನೋ, ಕಲ್ಲನ್ನೋ ದಾಟಿಹೋಗುವಂತೆ ವರ್ತಿಸಿ. ಅವರ ಕಡೆ ಯಾವ ಗಮನ ವನ್ನೂ ಕೊಡಬೇಡಿ. ಭಗವಂತನಲ್ಲಿಯೇ ಶರಣು ಹೋದವರ ವ್ಯವಹಾರವು ಹೀಗೆಯೇ ಇರಬೇಕು. ಸಹೃದಯರ ಮತ್ತು ಮಹಾಪುರುಷರ ಸಂಗವು ನಮ್ಮಲ್ಲಿ ಆಧ್ಯಾತ್ಮಿಕ ಜಾಗೃತಿ ಯನ್ನು ಉಂಟುಮಾಡುತ್ತದೆ. ಆಧ್ಯಾತ್ಮಿಕ-ದೂರರಾದ ಶತ್ರು ಗಳಿಂದ ಆದಷ್ಟೂ ದೂರವಿರಿ. ಉದಾಸೀನರೊಂದಿಗೆ ಒಡ ನಾಡದಿರಿ. ನಿಮಗೆ ದೊರೆಯಬಹುದಾದ ಪ್ರಾಪಂಚಿಕ ಅನುಕೂಲಗಳ ಸಲುವಾಗಿ ಎಂದಿಗೂ ಅಂತಹ ಜನರಿಗೆ ಗೌರವವನ್ನು ಕೊಡಲೇಬೇಡಿ. ಆ ಅನುಕೂಲಗಳೇ ನಿಮ್ಮನ್ನು ಖಂಡಿತ ಭಗವದ್ವೇಷಿಯನ್ನಾಗಿ ಮಾಡಿಬಿಡುವುವು. ಪರಮ

ಕಾರುಣ್ಯಮೂರ್ತಿಯಾದ ಪರಮಾತ್ಮನು ನೀವು ಕೇಳಿದ್ದನ್ನೆಲ್ಲಾ ಕೊಡುವನು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. ಎಂದಿಗೂ ಭಗವತ್ ಶತ್ರುಗಳನ್ನು ಬೇಡಬೇಡಿ."

## ರಾಮಾನುಜರ ಕೃತಿಗಳು

ವೇದಾಂತ ಪ್ರಸ್ಥಾನತ್ರಯಗಳಲ್ಲಿ ಒಂದಾದ ಬಾದರಾಯಣರ ವೇದಾಂತಸೂತ್ರಗಳಿಗೆ ಬರೆದ ಶ್ರೀಭಾಷ್ಯ ರಾಮಾನುಜರ ಕೃತಿಗಳಲ್ಲಿ ಅತ್ಯಂತ ಮುಖ್ಯವಾದದ್ದು. ಇದಲ್ಲದೆ, ಅವರು ಇತರ ಎಂಟು ಕೃತಿಗಳನ್ನು ರಚಿಸಿದ್ದಾರೆ. ಅವು ಹೀಗಿವೆ:

೧. **ವೇದಾರ್ಥ ಸಂಗ್ರಹ** : ಉಪನಿಷತ್ತುಗಳ ತತ್ತ್ವವನ್ನು ವಿವರಿಸುವ ಪ್ರಕರಣ ಗ್ರಂಥ.

೨. **ವೇದಾಂತ ಸಾರ** ೩. **ವೇದಾಂತ ದೀಪ** : ಇವೆರಡಲ್ಲೂ ವೇದಾಂತ ಸೂತ್ರಗಳ ಸಂಕ್ಷಿಪ್ತ ವಿವರಣೆ ಇದೆ.

೪. **ಗೀತಾಭಾಷ್ಯ** : ಭಗವದ್ಗೀತೆಯ ಮೇಲಿನ ಭಾಷ್ಯ.

೫. **ನಿತ್ಯಗ್ರಂಥ** : ವೈಷ್ಣವ ಅನುಯಾಯಿಗಳಿಗೆ ದೈನಂದಿನ ಧಾರ್ಮಿಕ ಆಚರಣೆಗಳು ಮತ್ತು ವಿಧಿವಿಧಾನಗಳ ಬಗ್ಗೆ ತಿಳಿಸಿಕೊಡುವ ಗ್ರಂಥ.

### ಗದ್ಯತ್ರಯ:

೬. **ಶರಣಾಗತಿ ಗದ್ಯ** : ಪ್ರಪತ್ತಿಯ ಮಾಹಾತ್ಮ್ಯವನ್ನು, ಅದರ ಬಗೆಯನ್ನು ವಿವರಿಸುವ ಗದ್ಯ.

೭. **ಶ್ರೀರಂಗಗದ್ಯ** : ತಮ್ಮನ್ನು ಸ್ವಾಮಿಯ ನಿತ್ಯಕಿಂಕರನನ್ನಾಗಿ ಮಾಡಿಕೊಳ್ಳುವಂತೆ ರಾಮಾನುಜರು ಶ್ರೀರಂಗನಾಥ ಸ್ವಾಮಿಗೆ ಮಾಡಿದ ಪ್ರಾರ್ಥನೆ.

೮. **ವೈಕುಂಠ ಗದ್ಯ** : ಭಕ್ತನಾದವನು ಆಗಾಗ್ಗೆ ಸ್ಮರಿಸಬೇಕಾದ ಶ್ರೀಮನ್ನಾರಾಯಣನ ನಿವಾಸಸ್ಥಾನವಾದ ವೈಕುಂಠದ ವಿವರಣೆ.

ಕೆಲವು ತತ್ತ್ವಶಾಸ್ತ್ರದ ವಿಮರ್ಶಕರು ಶ್ರೀಭಾಷ್ಯದಂತಹ ತಾತ್ತ್ವಿಕ ಕೃತಿಯನ್ನು ರಚಿಸಿದ ರಾಮಾನುಜರು ಭಗವಂತನಲ್ಲಿ ಆಶ್ರಯವನ್ನು ಯಾಚಿಸುವ ಮತ್ತು ದಿವ್ಯಧಾಮವಾದ ವೈಕುಂಠದ ಅದ್ಭುತ ವರ್ಣನೆಗಳಂತಹ ಶುದ್ಧಭಕ್ತಿಯ ಸ್ತೋತ್ರಗಳನ್ನು ರಚಿಸಿರಬಹುದು ಎಂದು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ, ಈ ಸ್ತೋತ್ರಗಳಲ್ಲಿ ತಾತ್ತ್ವಿಕ ಚಿಂತನೆಯು ಲೇಶಮಾತ್ರವೂ ಕಾಣಬರುವುದಿಲ್ಲ. ಆದರೆ, ಅಂತಹ ವಿಮರ್ಶಕರು, ರಾಮಾನುಜರು ಮೂಲತಃ ಮತ್ತು ಪ್ರಧಾನತಃ ಒಬ್ಬ ಭಕ್ತರು ಎಂಬುದನ್ನು ಮರೆತುಬಿಡುತ್ತಾರೆ. ರಾಮಾನುಜರಿಗೆ ತಾತ್ತ್ವಿಕ ಶಾಸ್ತ್ರವು ವೈದಿಕ ಮೀಮಾಂಸೆಯನ್ನೂ ಆಳ್ವಾರರ ಭಾವನಾತ್ಮಕತೆಯನ್ನೂ ಕೂಡಿಸುವ ಸೇತುವೆಯಾಗಿತ್ತು ಅಷ್ಟೆ. ರಾಮಾನುಜರು ೧೨೦ ವರ್ಷಗಳ ಸುದೀರ್ಘ ಜೀವನವನ್ನು ನಡೆಸಿದ ಕಾರಣ, ಯೌವನದ ಭಾವನೆಗಳು ಮತ್ತು ಸ್ವಭಾವಗಳು ಪರಿವರ್ತನೆ ಹೊಂದಿ, ವೃದ್ಧಾಪ್ಯದ ದಿನಗಳಲ್ಲಿ, ಬಾಹ್ಯ ಜಗತ್ತಿನ ಬಗೆಗೆ ಉದಾಸೀನ ಭಾವನೆಯನ್ನು ಹೊಂದುವುದು ಸಹಜವಾಗಿಯೇ ಇದೆ.

ರಾಮಾನುಜರು ತಮಿಳು ಭಾಷೆಯಲ್ಲಿ ಯಾವ ಕೃತಿಯನ್ನೂ ರಚಿಸಿದಂತೆ ಕಾಣಬರುವುದಿಲ್ಲ. ಆದರೆ ಅವರು ಆ ಭಾಷೆಯಲ್ಲಿ ಪ್ರವಚನಗಳನ್ನು ನೀಡುತ್ತಿದ್ದರು. ಸಾಧಾರಣವಾಗಿ, ಆ ಪ್ರವಚನಗಳ ವಿಷಯ, ನಮ್ಮಾಳ್ವಾರರ ತಾತ್ತ್ವಿಕ 'ತಿರುವಾಯ್ಮೊಳಿ' ಗ್ರಂಥ. ಆ ಪ್ರವಚನಗಳನ್ನು, ರಾಮಾನುಜರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬನಾಗಿದ್ದ ಕುರುಕೇಶ ಅಥವಾ ಪಿಲ್ಲಾನ್ ಎನ್ನುವವನು ಸಂಸ್ಕೃತಮಯವಾದ ತಮಿಳು ಭಾಷೆಯಲ್ಲಿ *ಆರಾಯಿರ* (ಆರುಸಾವಿರ) ಎಂಬುದಾಗಿ ಸಂಗ್ರಹಿಸಿದ್ದಾನೆ. ಹೀಗೆ ಯಾಮುನರ ಎದುರಿನಲ್ಲಿ ರಾಮಾನುಜರು "ನಮ್ಮಾಳ್ವಾರರ ಉಪದೇಶಗಳನ್ನು ಪ್ರಸಾರ ಮಾಡುತ್ತೇನೆ" ಎಂದು ಮಾಡಿದ ಪ್ರತಿಜ್ಞೆ ಕೈಗೂಡಿದಂತಾಯಿತು.

ಕಡೆಯಲ್ಲಿ ಒಂದು ಮಹತ್ವಪೂರ್ಣವಾದ ಸಂಗತಿಯೊಂದನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕು. ರಾಮಾನುಜರ ಭಕ್ತಿತತ್ತ್ವವು ದಕ್ಷಿಣಭಾರತ ಅಥವಾ ತಮಿಳುನಾಡು ಪ್ರದೇಶಕ್ಕಿಂತಲೂ ಅತೀ ವಿಸ್ತಾರವಾದ ಕ್ಷೇತ್ರದಲ್ಲಿ ಪ್ರಭಾವವನ್ನು ಬೀರಿದೆ. ಉತ್ತರಭಾರತದ ಅನೇಕ ವೈಷ್ಣವ ಮತಗಳು ರಾಮಾನುಜರ ಉಪದೇಶಗಳಿಂದಲೇ ಪ್ರಭಾವಿತವಾಗಿ ಜನ್ಮತಳೆದಂತಹವು. ರಾಮಾನಂದ (೧೩೦೦–೧೪೧೧)ರಂಬ ಏಕದೇವವಾದದ ಪ್ರತಿಪಾದಕರು ಮತ್ತು ಉತ್ತರ ಭಾರತದ ರಾಮಾಯತ ಪಂಗಡಗಳ ಸಂಸ್ಥಾಪಕರು, ರಾಮಾನುಜರ ಅನುಯಾಯಿಯಾಗಿದ್ದವರು. ಇವರು ಉತ್ತರದ ವೈಷ್ಣವ ಮತದ ಹನ್ನೆರಡು ಮಹತ್ವದ ನಾಯಕರಿಗೆ, ಹೆಚ್ಚುಕಡಿಮೆ ಗುರುವೂ ಆಧ್ಯಾತ್ಮಿಕ ಪ್ರೇರಕರೂ ಆಗಿದ್ದರು. ಅವರ ಆ ಶಿಷ್ಯರಲ್ಲಿ ಎಲ್ಲಾ ಜಾತಿಯವರೂ ಇದ್ದರು. ಚಮ್ಮಾರ ಮತ್ತು ಮುಸ್ಲಿಮ್ ಕೂಡಾ ಸೇರಿದ್ದರು. ಅವರಲ್ಲೆಲ್ಲಾ ಎದ್ದು ಕಾಣುವವನೆಂದರೆ ಕಬೀರ್. ಅವನು ವೈಷ್ಣವ ಮತ್ತು ಮುಸ್ಲಿಮ್. ಏಕದೇವತತ್ತ್ವಗಳ ಏಕೀಕರಣಕ್ಕೆ ಬಹಳ ಶ್ರಮಪಟ್ಟನು. ಇನ್ನೊಬ್ಬ ಶಿಷ್ಯ ಹುಟ್ಟಿನಿಂದ ಚಮ್ಮಾರನಾದ ರವಿದಾಸ್. ಅವನೇ ಸುಪ್ರಸಿದ್ಧ ಮೀರಾಬಾಯಿಗೆ ಭಕ್ತಿ ರಹಸ್ಯದಲ್ಲಿ ದೀಕ್ಷೆಯನ್ನಿತ್ತವನು. ಉಳಿದ ಶಿಷ್ಯರುಗಳೆಂದರೆ, ಕ್ಷೌರಿಕ ಜನಾಂಗದ ಸೇನ, ಜಾಟ್ ಪಂಗಡಕ್ಕೆ ಸೇರಿದ ದಾನಾ ಮತ್ತು ರಾಜಪೂತ ರಾಜಕುಮಾರನಾದ ಪೀಪ. ನಂತರದ ದಿನಗಳಲ್ಲಿ, ಏಕದೇವತತ್ತ್ವದ ಭಕ್ತಿ ಪಂಥದ ಮಹಾನ್ ನಾಯಕರಾದ ತುಲಸೀದಾಸ್ ಮತ್ತು ದಾದು ರಾಮಾನುಜರ ಉಪದೇಶಗಳಿಂದಲೇ ಸ್ಫೂರ್ತಿಯನ್ನು ಪಡೆದರು.

(ಮುಗಿಯಿತು)